1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ  ನ್ಯಾಯಾಲಯ, ಚಿಕ್ಕಮಗಳೂರು

<u>ಸ್ಪೆಷಲ್  ಮೊಕದ್ದಮೆ ಸಂಖ್ಯೆ: 83/2018</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ವಿಠಲ | ಪಿ.ಡಬ್ಲ್ಯೂ. | 05 |
| ತಂದೆಯ ಹೆಸರು | ಸೀನಪ್ಪ | ಸಿ.ಡಬ್ಲ್ಯೂ. | 02 |
| ವಯಸ್ಸು | 43  ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಉಜ್ಜಿನಿ | | |

ದಿಃ 19.10.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ   ಸರ್ಕಾರಿ ಅಭಿಯೋಜಕರಿಂದಃ-</u>

1. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು. ಚಾಸಾ.1, 3 ರಿಂದ 7 ರವರು ಗೊತ್ತು.
2. ದಿಃ 08.01.2018 ರಂದು ನಾನು ಕೆಎ-18/823 ರ ಸಹಕಾರ ಸಾರಿಗೆ ಬಸ್ಸಿನಲ್ಲಿ ಬಾಳೆಹೊನ್ನೂರಿನಿಂದ ಬರುತ್ತಿದ್ದೆ. ಸದರಿ ಬಸ್ಸು ಖಾಂಡ್ಯ ಚೆಕ್ ಪೋಸ್ಟಿನ ಬಳಿ ಬಂದಾಗ ಆರೋಪಿತರು ಬೈಕನ್ನು ರಸ್ತೆ ಮಧ್ಯೆ ನಿಲ್ಲಿಸಿಕೊಂಡು ಮಾತನಾಡುತ್ತಿದ್ದರು. ರಸ್ತೆ ಮಧ್ಯೆ ಬೈಕು ಇದ್ದರಿಂದ ಬಸ್ಸನ್ನು ನಿಲ್ಲಿಸಿದ್ದು, ಬಸ್ಸಿನನಲ್ಲಿದ್ದವರು ಸೈಡ್ ಬಿಡುವಂತೆ ಹೇಳಿದರು. ಆಗ ಚಾಸಾ.1 ರವರು ಆರೋಪಿತರಿಗೆ ಸೈಡಿಗೆ ನಿಲ್ಲಿಸಿ ಎಂದು ಹೇಳಿದರು. ನಂತರ ಆರೋಪಿತರು ಬಸ್ಸನ್ನು ಹಿಂಬಾಲಿಸಿಕೊಂಡು ಬಂದು ಉಜಿನಿ ಬಸ್ಸು ನಿಲ್ದಾಣದಲ್ಲಿ ಚಾಸಾ.1 ರವರ ಮೇಲೆ ಹಲ್ಲೆ ಮಾಡಿದರು. ಹಲ್ಲೆ ಮಾಡಿ ಸೂಳೆ ಮಗನೇ, ಜಾತಿ ನಾಡ ಎಂದು ಸಹ ಬೈದರು. ಆರೋಪಿತರು ಚಾಸಾ.1 ರವರು ಧರಿಸಿದ್ದ

ಟೀ ಶರಟನ್ನು ಹಿಡಿದು ಎಳೆದು, ಹರಿದು ಕೋಲಿನಿಂದ ಹೊಡೆದರು. ನಾನು ಮತ್ತು ಚಾಸಾ.3 ರವರು ಜಗಳ ಬಿಡಿಸಿ ಚಾಸಾ.1 ರವರನ್ನು ಅವರ ಮನೆಗೆ ಬಿಟ್ಟೆವು. ನಂತರ ಅವರ ಮನೆಯವರು ಚಾಸಾ.1 ರವರನ್ನು ಚಿಕ್ಕಮಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ದಿನ ಕೃತ್ಯ ಎಸಗಿದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ನಾನು ಪೊಲೀಸರ ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ತನ್ನ ಹೇಳಿಕೆಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 08.01.2018 ರಂದು ಆರೋಪಿತರು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡಿದ್ದು, ಬಸ್ ಡ್ರೈವರ್ ಹಾರ್ನ ಮಾಡಿದರೂ ಸಹ ಸೈಡ್ ಕೊಡಲಿಲ್ಲ ಎಂದರೆ ಸರಿ. ಆಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ಆರೋಪಿತರಿಗೆ ಸೈಡ್ ಕೊಡುವಂತೆ ಕೇಳಿದರು ಎಂದರೆ ಸರಿ. ಆಗ ಆರೋಪಿತರು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈದ್ದುರು ಎಂದರೆ ಸರಿ. ನಂತರ ಬಸ್ಸು ಉಜ್ಜನಿ ಬಸ್ ನಿಲ್ದಾಣದ ಹತ್ತಿರ ಬಂದಾಗ ಆರೋಪಿತರು ಬಂದು ಬಸ್ಸಿಗೆ ಅಡ್ಡಲಾಗಿ ಬೈಕನ್ನು ನಿಲ್ಲಿಸಿ, ಬಸ್ಸಿನ ಡೋರ್ ಬಳಿ ನಿಂತಿದ್ದ ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು

ಹೊಲೆಯ ಸೂಳೇಮಗನೇ, ಜಾತಿನಾಡ, ರಸ್ತೆ ನಿನ್ನ ಅಪ್ಪನಧ ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈಯ್ದು, ಕೈಯಿಂದ ಮೈಕೈಗೆ ಹೊಡೆದರು ಎಂದರೆ ಸರಿ. ಅಲ್ಲದೆ ಚಾಸಾ.1 ರವರ ಶರಟನ್ನು ಹರಿದು ಬಿಸಾಡಿ ರಸ್ತೆ ಬದಿಯಲ್ಲಿ ಚಾಸಾ.1 ರವರನ್ನು ನೆಲಕ್ಕೆ ಹಾಕಿ ಚಪ್ಪಲಿ ಕಾಲಿನಲ್ಲಿ ತುಳಿದು ಜಾತಿ ನಿಂದನೆ ಮಾಡಿ, ನಮ್ಮ ತಂಟೆಗೆ ಬಂದರೆ ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ದಿಃ 10.01.2018 ರಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಐ.ಎಸ್.ಟಿ. ರವರಿಂದ</u>

4. ನಾನು ಮತ್ತು ಚಾಸಾ.1 ರವರ ಒಂದೇ ಜಾತಿಯವರು ಎಂದರೆ ಸರಿ. ಸಾಮಾನ್ಯವಾಗಿ ಕೂಲಿ ಕೆಲಸಕ್ಕೆ ಬೆಳಿಗ್ಗೆ ಹೋದರೆ ಸಂಜೆ ವಾಪಾಸ್ಸು ಬರುತ್ತೇವೆ ಎಂದರೆ ಸರಿ. ಆ ದಿನ ನಾನು ಕೂಲಿ ಕೆಲಸಕ್ಕೆ ಹೋಗಿರಲಿಲ್ಲ. ನಮ್ಮೂರಿಗೆ ಮೇಲೆ ಹೇಳಿದ ಬಸ್ಸು ಮಾತ್ರ ಓಡಾಡುತ್ತದೆ. ಸದರಿ ಬಸ್ಸಿನ ಚಾಲಕ ಗಿರೀಶ. ಸದರಿ ದಿನ ಬಸ್ಸಿನ ನಿರ್ವಾಹಕರು ಯಾರು ಇದ್ದರು ಎಂದು ಗೊತ್ತಿಲ್ಲ. ಸದರಿ ದಿನ ರಸ್ತೆಗೆ ಅಡ್ಡಲಾಗಿ ನಿಲ್ಲಿಸಿದ್ದ ಬೈಕಿನ ವಿಶೇಷ ಗುರುತು ಎಂದರೆ ಹಿರೋ ಹೋಂಡ ಎನ್ನುತ್ತೇನೆ. ಸದರಿ ದ್ವಿಚಕ್ರವಾಹನದ ನಂಬರು ಹೇಳಲು ಆಗುವುದಿಲ್ಲ. ರಸ್ತೆ ಮೇಲೆ ಪ್ರಾಣಿ ಅಥವ ಮರ ಬಿದ್ದಿದ್ದರೆ ಬಸ್ಸಿನ ಚಾಲಕ ಹಾಗೂ ಕಂಡಕ್ಟರ್ ತೆರುವುಗೊಳಿಸುತ್ತಾರೆ ಎಂದರೆ ಸರಿ. ಸದರಿ ದಿನ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದರೆ, ಆ ದಿನ 2 ಹಾಗೂ 3 ನೇ ಆರೋಪಿತರು ಬಿಳಿ ಬಣ್ಣದ ಬಟ್ಟೆ ಧರಿಸಿದ್ದರು ಎನ್ನುತ್ತೇನೆ.

ಆರೋಪಿತರು ನಮ್ಮ ಊರಿನವರಲ್ಲ ಎಂದರೆ ಸರಿ. ಆದರೆ ಪರಿಚಯವಿರುತ್ತಾರೆ. ನಾನು ಆರೋಪಿತರ ಮನೆ ಕಾರ್ಯಕ್ಕೆ ಹೋಗಿಲ್ಲ. ಆರೋಪಿತರ ತಂದೆ ಹೆಸರನ್ನು ಆ ದಿನ ಹೇಳಿರಲಿಲ್ಲ.

5. ಉಜಿನಿ ಬಸ್ಸು ನಿಲ್ದಾಣದಲ್ಲಿ ಗಲಾಟೆಯಾದ ಜಾಗದ ಚಕ್ಕುಬಂದಿ ಪೂರ್ವಕ್ಕೆ ಉಜಿನಿ ಊರು, ಪಶ್ಚಿಮಕ್ಕೆ ಕಾಡು, ಉತ್ತರಕ್ಕೆ ಉಜಿನಿ ರಸ್ತೆ, ದಕ್ಷಿಣಕ್ಕೆ ರಸ್ತೆ ಬರುತ್ತದೆ. ಆ ದಿನ ಬಸ್ಸಿನಲ್ಲಿ ನಮ್ಮ ಊರಿನ ಬೇರೆ ಗ್ರಾಮಸ್ಥರು ಇದ್ದರು ಎಂದರೆ ಸರಿ. ಆ ದಿನ ನಮ್ಮಿಬ್ಬರನ್ನು ಹೊರತು ಪಡಿಸಿ ಬಸ್ಸಿನಲ್ಲಿದ್ದ ಬೇರೆಯವರು ಗಲಾಟೆ ಬಿಡಿಸಲು ಬಂದಿಲ್ಲ. ನಾನು ಮೊಬೈಲ್ ಪೋನು ಬಳಸುತ್ತೇನೆ. ಆ ರೀತಿ ಘಟನೆ ಆದಾಗ ಪೋಲೀಸರಿಗೆ ಪೋನು ಮಾಡಿರುತ್ತೇನೆ. ಇದನ್ನು ಪೋಲೀಸರಿಗೆ ಹೇಳಿದ್ದೇನೆ. ಯಾವ ಆರೋಪಿತರು ಚಾಸಾ.1 ರವರಿಗೆ ಎಲ್ಲೆಲ್ಲಿ ಹೊಡೆದರು ಎಂದರೆ, 1 ನೇ ಆರೋಪಿ ಚಾಸಾ.1 ರವರ ಕಾಲರ್ ಹಿಡಿದು ಕಪಾಳಕ್ಕೆ ಹೊಡೆದಿರುತ್ತಾನೆ. ಆ ದಿನ ಚಾಸಾ.1 ರವರು ಬಿಳಿ ಟೀ ಶರಟನ್ನು ಹಾಕಿಕೊಂಡಿದ್ದರು. ಆ ದಿನ ಗಲಾಟೆ ಸಂಜೆ 5.30 ಕ್ಕೆ ಆಯಿತು. 5.30 ರಿಂದ 15 ನಿಮಿಷ ನಡೆಯಿತು. ಆ ದಿನ ಆರೋಪಿತರನ್ನು ಹಿಡಿದು ಪೋಲೀಸರಿಗೆ ಒಪ್ಪಿಸಲು ಪ್ರಯತ್ನಪಟ್ಟೆವು. ನಾನು ಘಟನೆ ಬಗ್ಗೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ, ಆದರೆ ದಿನಾಂಕ ಹೇಳಲು ಆಗುವುದಿಲ್ಲ. ಆ ದಿನ ನಾನು ಬಸ್ಸಿನಲ್ಲಿ ಪ್ರಯಾಣ ಮಾಡಿದ ಬಗ್ಗೆ ಟಿಕೆಟನ್ನು ಪೋಲೀಸರಿಗೆ ಕೊಟ್ಟಿಲ್ಲ.

6. ಸಾಮಾನ್ಯವಾಗಿ ಚೆಕ್ ಪೋಸ್ಟಿನಲ್ಲಿ ಪೋಲೀಸರು ಇರುತ್ತಾರೆ ಎಂದರೆ ಸರಿಯಲ್ಲ. ಚೆಕ್ ಪೋಸ್ಟಿನ ಹತ್ತಿರ ಗಲಾಟೆಯನ್ನು ಸುತ್ತಮುತ್ತ

ಮನೆಯವರು ನೋಡಿದ್ದಾರೋ ಇಲ್ಲವೊ ಎಂದು ನಾನು ಗಮನಿಸಿಲ್ಲ. ಆ ದಿನ ಟೀ ಶರಟನ್ನು ಅಲ್ಲೆ ಬಿಸಾಡಿ ಹೋದರೋ ಅಥವ ಮನೆಗೆ ತೆಗೆದುಕೊಂಡು ಹೋದರೋ ಎಂದರೆ ಅಲ್ಲೆ ಬಿಸಾಡಿ ಹೋದರು ಎನ್ನುತ್ತೇನೆ. ನಾನು ಹಾಗೂ ಚಾಸಾ.1 ರವರು ಒಂದೇ ಜಾತಿಯವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಬಸ್ಸಿನಲ್ಲಿ ಪ್ರಯಾಣ ಮಾಡಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

7. ದಿಃ 08.01.2018 ರಂದು ನಾನು ಕೆಎ-18/823 ರ ಸಹಕಾರ ಸಾರಿಗೆ ಬಸ್ಸಿನಲ್ಲಿ ಬಾಳೆಹೊನ್ನೂರಿನಿಂದ ಬರುತ್ತಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಬಸ್ಸು ಖಾಂಡ್ಯ ಚೆಕ್ ಪೋಸ್ಟಿನ ಬಳಿ ಬಂದಾಗ ಆರೋಪಿತರು ಬೈಕನ್ನು ರಸ್ತೆ ಮಧ್ಯೆ ನಿಲ್ಲಿಸಿಕೊಂಡು ಮಾತನಾಡುತ್ತಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ರಸ್ತೆ ಮಧ್ಯೆ ಬೈಕು ಇದ್ದರಿಂದ ಬಸ್ಸನ್ನು ನಿಲ್ಲಿಸಿದ್ದು, ಬಸ್ಸಿನನಲ್ಲಿದ್ದವರು ಸೈಡ್ ಬಿಡುವಂತೆ ಹೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಆರೋಪಿತರಿಗೆ ಸೈಡಿಗೆ ನಿಲ್ಲಿಸಿ ಎಂದು ಹೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಆರೋಪಿತರು ಬಸ್ಸನ್ನು ಹಿಂಬಾಲಿಸಿಕೊಂಡು ಬಂದು ಉಜಿನಿ ಬಸ್ಸು ನಿಲ್ದಾಣದಲ್ಲಿ ಚಾಸಾ.1 ರವರ ಮೇಲೆ ಹಲ್ಲೆ ಮಾಡಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಹಲ್ಲೆ ಮಾಡಿ ಸೂಳೆ ಮಗನೇ, ಜಾತಿ ನಾಡ ಎಂದು ಸಹ ಬೈದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರು ಧರಿಸಿದ್ದ ಟೀ ಶರಟನ್ನು ಹಿಡಿದು ಎಳೆದು, ಹರಿದು ಕೋಲಿನಿಂದ ಹೊಡೆದರು

ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.3 ರವರು ಜಗಳ ಬಿಡಿಸಿ ಚಾಸಾ.1 ರವರನ್ನು ಅವರ ಮನೆಗೆ ಬಿಟ್ಟೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಅವರ ಮನೆಯವರು ಚಾಸಾ.1 ರವರನ್ನು ಚಿಕ್ಕಮಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪೊಲೀಸರ ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

8. ದಿಃ 08.01.2018 ರಂದು ಆರೋಪಿತರು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡಿದ್ದು, ಬಸ್ ಡ್ರೈವರ್ ಹಾರ್ನ ಮಾಡಿದರೂ ಸಹ ಸೈಡ್ ಕೊಡಲಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ಆರೋಪಿತರಿಗೆ ಸೈಡ್ ಕೊಡುವಂತೆ ಕೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಆರೋಪಿತರು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈಯ್ದುರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಬಸ್ಸು ಉಜ್ಜನಿ ಬಸ್ ನಿಲ್ದಾಣದ ಹತ್ತಿರ ಬಂದಾಗ ಆರೋಪಿತರು ಬಂದು ಬಸ್ಸಿಗೆ ಅಡ್ಡಲಾಗಿ ಬೈಕನ್ನು ನಿಲ್ಲಿಸಿ, ಬಸ್ಸಿನ ಡೋರ್ ಬಳಿ ನಿಂತಿದ್ದ ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು ಹೊಲೆಯ ಸೂಳೇಮಗನೇ, ಜಾತಿನಾಡ, ರಸ್ತೆ ನಿನ್ನ ಅಪ್ಪನಥ ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈಯ್ದು, ಕೈಯಿಂದ ಮೈಕೈಗೆ ಹೊಡೆದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲದೆ ಚಾಸಾ.1 ರವರ ಶರಟನ್ನು ಹರಿದು ಬಿಸಾಡಿ ರಸ್ತೆ

ಬದಿಯಲ್ಲಿ ಚಾಸಾ.1 ರವರನ್ನು ನೆಲಕ್ಕೆ ಹಾಕಿ ಚಪ್ಪಲಿ ಕಾಲಿನಲ್ಲಿ ತುಳಿದು ಜಾತಿ ನಿಂದನೆ ಮಾಡಿ, ನಮ್ಮ ತಂಟೆಗೆ ಬಂದರೆ ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ದಿಃ 10.01.2018 ರಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.